ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ರೈತನಿಗೂ, ಯೋಧರಿಗೂ ಇರುವ ಸಾಮ್ಯ ಮತ್ತು ವ್ಯತ್ಯಾಸವೇನು?*



ರೈತ ದೇಶದ ಬೆನ್ನೆಲುಬು; ಯೋಧ ದೇಶದ ಕಣ್ಣು. ಇಬ್ಬರೂ 'ಗುಂಡಿಗೆ' ಬಲಿಯಾಗುವ ಸಾಧ್ಯತೆ ಇದೆ.

ಪಿ.ಜೆ. ರಾಘವೇಂದ್ರ, ಮೈಸೂರು
*ಕಾಯಕವೇ ಕೈಲಾಸ. ವೈಕುಂಠ...?*
ಕಾಲೊತ್ತಲು ಸಾಕ್ಷಾತ್ ಲಕ್ಷ್ಮಿಯೇ ಇರುವುದರಿಂದ – ವೈಭೋಗವೇ ವೈಕುಂಠ.

ಆರ್. ಮಧುಸೂಸನ್, ಹಾಸನ
*ನೇತ್ರದಾನ ಮಾಡಬೇಕು ಎಂದುಕೊಂಡಿದ್ದೇನೆ. ಹುಡುಗಿಗೆ ಮಾಡಲೊ, ಹುಡುಗನಿಗೆ ಮಾಡಲೊ?*
ಹುಡುಗಿಗೆ ಕೊಡಿ. ಮುಂದೆ ಹೋಗುವವಳು ಅವಳೇ – ಹುಡುಗರೇನಿದ್ದರೂ ಹಿಂಬಾಲಕರು.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಅಕ್ಷತೆಗೂ, ಅಕ್ಕಿ ಕಾಳಿಗೂ ಇರುವ ವ್ಯತ್ಯಾಸ?*
ತಲೆ ಬಾಗಿದರೆ ಅಕ್ಷತೆ; ತಲೆ ವಾಲಿದರೆ ಅಕ್ಕಿಕಾಳು.

ಕೃಷ್ಣಮೂರ್ತಿ ಎಸ್., ಬೆಂಗಳೂರು
*ನನ್ನ ನಿರ್ಮಾಣದ 'ಛತ್ರಿಗಳು ಸಾರ್ ಛತ್ರಿಗಳು' ಚಿತ್ರದ ನಾಯಕನ ಪಾತ್ರಕ್ಕೆ ನೀವೇ ಸೂಕ್ತ. ಏನಂತೀರಾ...?*




ನೀವೇ ಛತ್ರಿಯ ಪಾತ್ರದ ವಿಲನ್ ಮತ್ತು ನಾನೇ ಛತ್ರಿಗಳ ರಿಪೇರಿ ಮಾಡುವ ಹೀರೋ ಆದ್ದರಿಂದ – ಒಪ್ಪಿದೆ.

ಬೆಳ್ಳಾವೆ ರಮೇಶ್, ಬೆಂಗಳೂರು
*ಬಂಧುಗಳಲ್ಲಿ 3 ವಿಧವಂತೆ. ಯಾವುವು ಹೇಳಿ?*
ಮನಸ್ಸಿಗೆ ಹತ್ತಿರದವರು; ಹತ್ತಿಯೂ ಹತ್ತಿರದವರು; ಹತ್ತಿರದವರು (ಹತ್ತಿ+ಇರದವರು).

ಬಿ. ಚಂದ್ರೇಗೌಡ, ಬೆಂಗಳೂರು
*ನಡೆದು ಓಡಾಡುವುದನ್ನು 'ನಟರಾಜ ಸರ್ವೀಸ್' ಅಂತಾರಲ್ಲ, ಯಾಕೆ?*
ಆ ತಿಪ್ಪೆ, ಈ ಹಳ್ಳ, ಹಂಪು, ಕೊಚ್ಚೆಗಳನ್ನು ಏರಿ, ಜಾರಿ, ಹಾರುವ ಭಂಗಿಗಳು ನಟರಾಜನ ನೃತ್ಯಭಂಗಿಯನ್ನು ಹೋಲುವುದರಿಂದ.

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ
*ಪಟಾಯಿಸುವುದಕ್ಕೂ, ಲಪಟಾಯಿಸುವುದಕ್ಕೂ ಏನು ವ್ಯತ್ಯಾಸ?*
ಪಟಾಯಿಸುವಾಗ ಹೇಳುತ್ತಾರೆ 'ಏನು ಬೇಕಾದರೂ ಕೊಳ್ಳಿ'; ಲಪಟಾಯಿಸುವಾಗ ಮಾತಿನ ಅಗತ್ಯವಿಲ್ಲ, ಶುದ್ಧ ಕೊಳ್ಳಿ.

ಅಮರಯ್ಯಾ ಪತ್ರಿಮಠ, ಸುರಪೂರ
*ರಾಜಕಾರಣಿಗಳ ಪ್ರಾರ್ಥನೆಗೆ ದೇವರು ಒಲಿವನೆ?*
ಸ್ಲಮ್ಮುದೇವಾಯ ನಮಃ; ಬಾಟ್ಲಿ ದರ್ಶಯಾಮಿ; ರೌಡಿರಾಜಾಯ ನಮಃ; ದ್ರವ್ಯಂ ಸಮರ್ಪಯಾಮಿ ಎಂದರೆ ಒಲಿವನು!

ಸಿ.ಎಸ್. ವಿಜಯಲಕ್ಷ್ಮಿ, ಶಿವಮೊಗ್ಗ
*ಪ್ರಪಂಚದಲ್ಲಿ ಕೆಟ್ಟ ತಾಯಿ ಇರುವುದಿಲ್ಲ ಎನ್ನತ್ತಾರೆ. ಧಾರವಾಹಿಗಳಲ್ಲಿ ಅಮ್ಮ ಮಗಳಿಗೆ ಕೆಟ್ಟದ್ದನ್ನೇ ಹೇಳಿಕೊಡುತ್ತಾಳೆ. ಏಕೆ?*
ಅದಕ್ಕೆ ವಿಧಿಗಿಂತ ಕ್ರೂರವಾದ ಸ್ಕ್ರಿಪ್ಟ್‌ರೈಟರ್‌ನ ಬರಹವೇ ಕಾರಣ. ಟಿಆರ್‌ಪಿ ದಾಸರಿಗೆ ಕಿಂಚಿತ್ತು ದಯವಿಲ್ಲ.

ಬಾ.ರಂ. ಸುರೇಶ, ಶಿವಮೊಗ್ಗ
*ಇಲ್ಲೊಬ್ಬ ಅತ್ತೆ-ಸೊಸೆ ಬಹಳ ಅನ್ಯೋನ್ಯವಾಗಿರುವುದನ್ನು ಕಂಡರೆ ಹೊಟ್ಟೆಯುರಿಯುತ್ತದೆ. ಪರಿಹಾರವೇನು?*
ಇಬ್ಬರಿಗೂ ಸೀರಿಯಲ್‌ನಲ್ಲಿ ಪಾತ್ರ ಕೊಡಿಸಿ, ದ್ವೇಷದ ವಿವಿಧ ಮಜಲುಗಳಲ್ಲಿ ಅವರನ್ನು ಕಂಡು, ಹೊಟ್ಟೆಗೆ ಹಾಲು ಹೊಯ್ದುಕೊಳ್ಳಿ.

ವೀಣಾ ಶರ್ಮ, ಬೋಸ್ಮಾನಹಳ್ಳಿ
*ಹಿಂದೆ ಬರುತ್ತಿದ್ದ ಚಂದಮಾಮದ ಬೇತಾಳ ಇತ್ತೀಚೆಗೆ ಕಾಣುತ್ತಿಲ್ಲವಲ್ಲ...?*
ಇದೆಯಲ್ಲ! ರೂಪ ಬದಲಾಗಿದೆ; ಈಗಿನ ಟೆಲಿಮಾರ್ಕೆಟಿಂಗ್‌ನವರು ಅದೇ....

ವಿ. ಹಮೀದ್, ವಿಟ್ಲ
*ಶ್ರೇಯಸಿಯೇ ಪತ್ನಿಯಾಗಿ ಒಲಿದು ಬಂದರೆ ಹೇಗಿದ್ದೀತು?*
ಮಾಡಿದ ಕರ್ಮಕ್ಕೆ ಸರಿಯಾದ ಶಿಕ್ಷೆ ಅನುಭವಿಸಿದಂತಿದ್ದೀತು.

## ಬಹುಮಾನಿತ ಪ್ರಶ್ನೆ

ಎಸ್.ವಿ. ಶ್ರೀನಿವಾಸ, ಮೈಸೂರು
*ಮೈಸೂರಿನಾಗ ಹುಬ್ಬಳ್ಳಿ ಕನ್ನಡವನ್ನ, ಹುಬ್ಬಳ್ಳ್ಯಾಗ ಮೈಸೂರು ಕನ್ನಡವನ್ನ ಮಾತ್ನಾಡಿದ್ರ ಏನಾಗ್ತೈತಿ?*
ಹುಬ್ಬಳ್ಳ್ಯಾಗ ನರಸಿಂಹಸ್ವಾಮಿಗಳ, ಮೈಸೂರಿನಾಗ ಬೇಂದ್ರೆಯವರ ಕಂಪು ಅಗದಿ ಹರಡತೈತಿ.

ಎಚ್.ಆರ್. ದೇಸಾಯಿ, ರಾಯಚೂರು
*ಸತ್ಯವಾನ ಸಾವಿತ್ರಿಯ ನಂತರ ಯಾವ ಹೆಂಡತಿಯೂ ಗಂಡನನ್ನು ಯಮನಿಂದ ಮರಳಿ ಪಡೆಯಲು ಯತ್ನಿಸಲ್ಲಿಲ್ಲವೇಕೆ?*
ನರ್ಸಿಂಗ್ ಹೋಂ ಬಿಲ್ ತೆತ್ತು ಹೊರಬರುವಷ್ಟರಲ್ಲಿ ಯಮ ಮಾಯವಾಗಿರುತ್ತಾನಲ್ಲ....!

ಅಮೃತೇಶ್ವರ ತಂಡರ, ಅಣ್ಣಿಗೇರಿ
*ಜಾಸ್ತಿ ಬಳಕೆಯಾಗುವುದು ಬಹು ಬೇಗ ಸವಕಳಿ ಬರುತ್ತದೆ. ಆದರೆ ಬುದ್ಧಿ?*
ವಸ್ತುವಾದರೆ ಸವಕಳಿ; ಭಾವವಾದರೆ ನವ ಕಳೆ. ಬುದ್ಧಿ ರಾಗದ್ವೇಷಗಳಂತೆ; ಬಳಸಿದಷ್ಟೂ ನವ ಕಳೆ, ಪ್ರಖರ.

ಎಂ.ಕೆ. ರಾಜೇಶ್, ಚಾಮರಾಜನಗರ
*ಇಂದಿನ ಯುವಜನತೆಗೆ ತಾವು ನೀಡಬಯಸುವ ಅತ್ಯಮೂಲ್ಯ ಸಲಹೆ?*



ನೆಟ್ಟಲ್ಲಿ ರೋದಕ್ಕಿಂತ ನೆಟ್ಟಗೆರೋದನ್ನ ಕಲಿಯೋದು ಉತ್ತಮ.

ಆರತಿ ಘಟಿಕಾರ್, ದುಬೈ
*ನಾವು ವಿಶ್ವಾಸದಿಂದ ಕಾಣುತ್ತಿದ್ದ ಕುಟುಂಬ ವೈದ್ಯರು ಈಗ ಕಣ್ಮರೆಯಾಗುತ್ತಿದ್ದಾರಲ್ಲಾ...?*
ಅಯ್ಯೋ! ಅವರಿಗೇಕೆ ನೀವು ಮನೆ ವೈದ್ಯ ಹೇಳಹೋದಿರಿ! ಹೋಗೇಬಿಟ್ಟರೆ? ಅಕಟಕಟಾ!

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
*ಇಂದಿನ ಮಕ್ಕಳೇ ನಾಳೆಯ ಆಮೆಗಳು ಎಂದರೆ ಸರಿಹೋಗತ್ತಾ?*
ಸರಿಯೇ; ಅಪಘಾತಗಳು ಏರಿದಂತೆ ಆಮೆಯಂತೆಯೇ ಇಡೀ ಮೈಗೆ ಚಿಪ್ಪು ಧರಿಸುವ ಕಾಲ ಬಂದೀತು.

■ ರಾಮ್